# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 648 (834)
ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 10.03.2026
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು

******

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೌರಾಡಳಿತ ಇಲಾಖೆಯಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; | ರಾಜ್ಯದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ (ಮಹಾನಗರಪಾಲಿಕೆ ಹೊರತುಪಡಿಸಿ) ಒಟ್ಟು 36134 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 16625 ಖಾಯಂ ನೌಕರರು ಕಾರ್ಯನಿರ್ವಹಿಸುತ್ತಿದ್ದು, 19509 ಹುದ್ದೆಗಳು ಖಾಲಿಯಿರುತ್ತದೆ. ಇದಲ್ಲದೆ ಗುತ್ತಿಗೆ, ಹೊರಗುತ್ತಿಗೆ, ನೇರಪಾವತಿ, ಸಮಾನ ಕೆಲಸಕ್ಕೆ ಸಮಾನ ವೇತನ, ದಿನಗೂಲಿ ಆಧಾರದ ಮೇಲೆ ಒಟ್ಟು 12777 ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ 16625 ಖಾಯಂ ನೌಕರರು ಹಾಗೂ 12777 ಖಾಯಂ ಅಲ್ಲದ ನೌಕರರು ಸೇರಿ ಒಟ್ಟು 29402 ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| ಆ) | ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಮುಖ್ಯಾಧಿಕಾರಿಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು) | ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಮುಖ್ಯಾಧಿಕಾರಿಗಳ ಸಂಖ್ಯೆ 06 ವಿವರ ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಇ) | ಕಳೆದ ಐದು ವರ್ಷಗಳಲ್ಲಿ ಎಷ್ಟು ಮುಖ್ಯಾಧಿಕಾರಿಗಳ ಮೇಲೆ ಹಣ ದುರುಪಯೋಗ, ಅವ್ಯವಹಾರ ಇತರೆ ಕಾರಣಗಳ ಮೇಲೆ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ ಮತ್ತು ಅಮಾನತ್ತು ಮಾಡಲಾಗಿದೆ (ಸಂಪೂರ್ಣ ವಿವರ ನೀಡುವುದು) | ಕಳೆದ ಐವು ವರ್ಷಗಳಲ್ಲಿ 17 ಮುಖ್ಯಾಧಿಕಾರಿಗಳ ಮೇಲೆ ಹಣ ದುರುಪಯೋಗ, ಅವ್ಯವಹಾರ ಇತರೆ ಕಾರಣಗಳ ಮೇಲೆ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ ಮತ್ತು 11 ಮುಖ್ಯಾಧಿಕಾರಿಗಳನ್ನು ಅಮಾನತ್ತು ಮಾಡಲಾಗಿರುತ್ತದೆ. ವಿವರ ಅನುಬಂಧ-2 ರಲ್ಲಿ ಲಗತ್ತಿಸಿದೆ. |
| ಈ) | ನಿಯೋಜನೆ / ಸ್ವಂತ ಶ್ರೇಣಿಯ ಮೇಲಿರುವ ಹಲವು ಮುಖ್ಯಾಧಿಕಾರಿಗಳು ಅವ್ಯವಹಾರದಲ್ಲಿ ತೊಡಗಿದ ಆರೋಪ ಬಂದರೂ ಸಹ ಮಾತೃ ಇಲಾಖೆ ಅಥವಾ ಮೂಲ ಹುದ್ದೆಗೆ ಹಿಂತಿರುಗಿಸದೇ ಮುಖ್ಯಾದಿಕಾರಿ ಹುದ್ದೆಯಲ್ಲಿಯೇ ಮುಂದುವರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ , ಇವರನ್ನು ಮಾತೃ ಇಲಾಖೆಗೆ ಅಥವಾ ಮೂಲ ಹುದ್ದೆಗೆ ಹಿಂತಿರುಗಿಸಲು ಸರ್ಕಾರ ಕೈಗೊಂಡ ಕ್ರಮವೇನು? | ರಾಜ್ಯದ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ನಿಯೋಜನೆ ಅಥವಾ ಸ್ವಂತ ವೇತನ ಶ್ರೇಣಿಯ ಮೇಲೆ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವಿರುದ್ಧ ಅವ್ಯವಹಾರ ಹಾಗೂ ಕರ್ತವ್ಯ ಲೋಪವೆಸಗಿರುವುದು ಕಂಡುಬಂದಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ಸಿಸಿಎ) ನಿಯಮಗಳು, 1957ರ ನಿಯಮದನ್ವಯ ಆರೋಪಕ್ಕನುಸಾರವಾಗಿ ಶಿಸ್ತು ಕ್ರಮಜರುಗಿಸಿ, ಆರೋಪಿತ ಅಧಿಕಾರಿ/ ನೌಕರರನ್ನು ಮಾತೃ ಇಲಾಖೆಗೆ ಹಿಂದಿರುಗಿಸಲು ಅಥವಾ ಅವರ ಮೂಲ ಹುದ್ದೆಗೆ ನಿಯುಕ್ತಿಗೊಳಿಸಲಾಗುವುದು. |

ನಅಇ 23 ಎಲ್ ಸಿಕ್ಯೂ 2026(ಇ)

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ ಎಂ ಗೌಡ (ಪದವಿಧರ ಕ್ಷೇತ್ರ) ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 648 (834) ರ ಕುರಿತು

**ಅನುಬಂಧ- I**

| ಕ್ರ.ಸಂ | ನಗರ ಸ್ಥಳೀಯ ಸಂಸ್ಥೆ ಹೆಸರು | ಮುಖ್ಯಾಧಿಕಾರಿಗಳ ಹೆಸರು (ಶ್ರೀ/ಶ್ರೀಮತಿ) | ಮಾತೃ ಇಲಾಖೆ | ಮಾತೃ ಇಲಾಖೆಯಲ್ಲಿನ ಮೂಲ ಹುದ್ದೆ |
|---|---|---|---|---|
| 01 | ಯಡ್ರಾಮಿ ಪಟ್ಟಣ ಪಂಚಾಯತಿ, ಕಲಬುರಗಿ ಜಿಲ್ಲೆ | ವೈ ಶ್ಯಾಮ್ ಭಜಂತ್ರಿ | ಆರೋಗ್ಯ ಇಲಾಖೆ | ಆರೋಗ್ಯ ನಿರೀಕ್ಷಣಾಧಿಕಾರಿ |
| 02 | ಮುಲ್ಕಿ, ಪಟ್ಟಣ ಪಂಚಾಯತಿ, ದಕ್ಷಿಣ- ಕನ್ನಡ ಜಿಲ್ಲೆ | ಮಧುಕರ ಕೆ | ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ | ಗ್ರಾಮ ಪಂಚಾಯತಿ ಅಧಿಕಾರಿ |
| 03 | ನಾಯಕನಹಟ್ಟಿ, ಪಟ್ಟಣ ಪಂಚಾಯತಿ, ಚಿತ್ರದುರ್ಗ ಜಿಲ್ಲೆ | ಶ್ರೀನಿವಾಸ | ಆರೋಗ್ಯ ಇಲಾಖೆ | ಆರೋಗ್ಯ ನಿರೀಕ್ಷಣಾಧಿಕಾರಿ |
| 04 | ಬೈದೂರು, ಪಟ್ಟಣ ಪಂಚಾಯತಿ, ಉಡುಪಿ ಜಿಲ್ಲೆ | ಅಜಯ ಭಂಡಾರಕರ್ | ಆರೋಗ್ಯ ಇಲಾಖೆ | ಆರೋಗ್ಯ ನಿರೀಕ್ಷಣಾಧಿಕಾರಿ |
| 05 | ಜೋಗ್-ಕಾರ್ಗಲ್, ಪಟ್ಟಣ ಪಂಚಾಯತಿ, ಶಿವಮೊಗ್ಗ ಜಿಲ್ಲೆ | ಸುರೇಶ್ ಕೆ | ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ | ಕಛೇರಿ ಅಧೀಕ್ಷಕ |
| 06 | ಘಟಪ್ರಭಾ, ಪುರಸಭೆ, ಬೆಳಗಾವಿ ಜಿಲ್ಲೆ | ಮಲ್ಲಪ್ಪಾ ಎಸ್ ಪಾಟೀಲ್ | ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ | ಗ್ರಾಮ ಪಂಚಾಯತಿ ಅಧಿಕಾರಿ |

## ಅನುಬಂಧ-2

| ಕ್ರ ಸಂ | ವಿಭಾಗ | ನಗರ ಸ್ಥಳೀಯ ಸಂಸ್ಥೆಗಳು | ಪ್ರಕರಣ ಸಂಖ್ಯೆ | ಪ್ರಕರಣ ವಿವರ |
|---|---|---|---|---|
| 1 | ಕಲಬುರಗಿ ವಿಭಾಗ | ಲಿಂಗಸುಗೂರು ಪುರಸಭೆ | 1 | ಹಣ ದುರುಪಯೋಗ, ಅವ್ಯವಹಾರ ಇತರೆ ಕಾರಣಗಳ ಮೇಲೆ ಶ್ರೀ ರೆಡ್ಡಿ ರಾಯನಗೌಡ, ವಿರುದ್ಧ **ಅಮಾನತ್ತು ಮಾಡಲಾಗಿದೆ.** |
| 2 | | ಲಿಂಗಸುಗೂರು ಪುರಸಭೆ | 1 | ಹಣ ದುರುಪಯೋಗ, ಅವ್ಯವಹಾರ ಇತರೆ ಕಾರಣಗಳ ಮೇಲೆ ಶ್ರೀ ರವಿ ಸಿರುಗುಪ್ಪ ರವರ ವಿರುದ್ಧ **ಅಮಾನತ್ತು ಮಾಡಲಾಗಿದೆ.** |
| 3 | | ಸಿರುಗುಪ್ಪ ನಗರಸಭೆ | 1 | ಹಣ ದುರುಪಯೋಗ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೂ ಜಿ ಪ್ರೇಮ್ ಚಾರ್ಲ್ಸ್, ಇವರ ವಿರುದ್ಧ **ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ.** |
| 4 | | ಗುತ್ತಲ ಪಟ್ಟಣ ಪಂಚಾಯ್ತಿ | 1 | ಶ್ರೀ ಧರಣೇಂದ್ರ ಇವರನ್ನು **ಅಮಾನತ್ತು ಮಾಡಿ ಕಡ್ಡಾಯ ನಿವೃತ್ತಿಗೊಳಿಸಿ** ಆದೇಶಿಸಲಾಗಿರುತ್ತದೆ. |
| 5 | | ಶಹಾಬಾದ ನಗರಸಭೆ | 1 | ಶ್ರೀ ಕೆ ಗುರುಲಿಂಗಪ್ಪ ಇವರ ವಿರುದ್ಧ ಅನುಬಂಧ-1 ರಿಂದ 04ಅನ್ನು ಜಾರಿಗೊಳಿಸಲಾಗಿರುತ್ತದೆ. |
| 6 | | ಆಳಂದ ಪುರಸಭೆ | 1 | ಶ್ರೀ ಮಹಾವೀರ ಠಕಾಳೆ ಇವರ ವಿರುದ್ಧ ಅನುಬಂಧ-1 ರಿಂದ 04ಅನ್ನು ಜಾರಿಗೊಳಿಸಲಾಗಿರುತ್ತದೆ. |
| 7 | | ಅಫಜಲಪೂರ ಪುರಸಭೆ | 1 | ಶ್ರೀ ವಿಜಯ ಮಹಾಂತೇಶ ಇವರ ವಿರುದ್ಧ ಅನುಬಂಧ-1 ರಿಂದ 04ಅನ್ನು ಜಾರಿಗೊಳಿಸಲಾಗಿರುತ್ತದೆ. |
| 8 | ಬೆಳಗಾವಿ ವಿಭಾಗ | ನರೇಗಲ್ಲ ಪಟ್ಟಣ ಪಂಚಾಯಿತಿ | 1 | ಶ್ರೀ.ಆರ್.ಎ ಹೊಸಮನಿ, ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ದಿನಾಂಕ:24.11.2025ರಲ್ಲಿ ಪ್ರಕರಣ ಕುರಿತು ವಿಚಾರಣೆ ಕೈಗೊಳ್ಳಲು ಯೋಜನಾ ನಿರ್ದೇಶಕರು, ಗದಗ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. |
| 9 | | ಮುದ್ದೇಬಿಹಾಳ ಪುರಸಭೆ | 1 | ಶ್ರೀ.ಉಮೇಶ ಛಲವಾದಿ, ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ದಿನಾಂಕ:18.02.2025ರಲ್ಲಿ ಪ್ರಕರಣ ಕುರಿತು ವಿಚಾರಣೆ ಕೈಗೊಳ್ಳಲು ಯೋಜನಾ ನಿರ್ದೇಶಕರು, ವಿಜಯಪುರ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. |
| 10 | | ಅಥಣಿ ಪುರಸಭೆ | 1 | ಶ್ರೀ ಅಶೋಕ ಗುಡಿಮನಿ, ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲುದಿನಾಂಕ:17.05.2025ರಲ್ಲಿ ಪ್ರಕರಣ ಕುರಿತು ವಿಚಾರಣೆ ಕೈಗೊಳ್ಳಲು ಯೋಜನಾ ನಿರ್ದೇಶಕರು, ಬೆಳಗಾವಿ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. |
| 11 | | ರಾಮದುರ್ಗ ಪುರಸಭೆಯ | 1 | ಶ್ರೀ ವ್ಹಿ.ಸೊಗಲದ, ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ಆರೋಪಿತ ನೌಕರರಿಗೆ 2ನೇ ಕಾರಣ ಕೇಳಿ ನೋಟೀಸ್ ಜಾರಿ ಮಾಡಲು ಕ್ರಮವಹಿಸಲಾಗುತ್ತಿದೆ. |
| 12 | | ಉಗಾರಖುರ್ದ ಪುರಸಭೆ | 1 | ಶ್ರೀ ಸುನೀಲ ಬಬಲಾದಿ ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ದಿನಾಂಕ:13.08.2024ರಲ್ಲಿ ಪ್ರಕರಣ ಕುರಿತು ವಿಚಾರಣೆ ಕೈಗೊಳ್ಳಲು ಯೋಜನಾ ನಿರ್ದೇಶಕರು, ಬೆಳಗಾವಿ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. |
| 13 | | ಅಥಣಿ ಪುರಸಭೆ | 1 | ಶ್ರೀ ಜೆ.ಡಿ.ಗುದಿಗೆನ್ನವರ, ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ರವರು ಸಲ್ಲಿಸಿರುವ ವರದಿಯನ್ನುಸಲ್ಲಿಸುವ ಕುರಿತು ದಿನಾಂಕ:06.06.2024 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. |
| 14 | | ಚಿಕ್ಕೋಡಿ ಪುರಸಭೆ | 1 | ಶ್ರೀ ಸುಂದರ ರೋಗಿ, ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ದಿನಾಂಕ:06.06.2024ರ ಆದೇಶದಲ್ಲಿ ಯೋಜನಾ ನಿರ್ದೇಶಕರು, ಬೆಳಗಾವಿ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. |
| 15 | | ಸದಲಗಾ ಪುರಸಭೆ | 1 | ಶ್ರೀ ಸಾಬಣ್ಣಾ ಜಿ ಪೂಜೇರಿ, ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ದಿನಾಂಕ:17.05.2025ರ ರ ಆದೇಶದಲ್ಲಿ ಯೋಜನಾ ನಿರ್ದೇಶಕರು, ಬೆಳಗಾವಿ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. |

| | | | | |
|---|---|---|---|---|
| 16 | | ರಾಯಬಾಗ ಪಟ್ಟಣ ಪಂಚಾಯಿತಿ | 1 | ಶ್ರೀ ಸಂಜೀವ ಮಾಂಗ, ಮುಖ್ಯಾಧಿಕಾರಿ ರವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ದಿನಾಂಕ:28.05.2024ರ ಆದೇಶದಲ್ಲಿ, ಯೋಜನಾ ನಿರ್ದೇಶಕರು, ಬೆಳಗಾವಿ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. |
| 17 | ಬೆಂಗಳೂರು ವಿಭಾಗ | ಹಾರೋಹಳ್ಳಿ, ಪಟ್ಟಣ ಪಂಚಾಯಿತಿ | 1 | ಶ್ರೀಮತಿ. ಶ್ವೇತಾ ಬಾಯಿ, ಮುಖ್ಯಾಧಿಕಾರಿ ರವರ ವಿರುದ್ಧ ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗುತಿಗೆದಾರರಿಗೆ ಲಂಚ ಬೇಡಿಕೆ ಪ್ರಕರಣ ಕುರಿತಂತೆ ದಿನಾಂಕ:24.10.2024 ಎಂದು **ಅಮಾನತ್ತು** ಗೊಳಿಸಲಾಗಿರುತ್ತದೆ. ಮಾನ್ಯ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ:4975/2024ರ ಮಧ್ಯಂತರ ಆದೇಶದಂತೆ ಸದರಿಯವರನ್ನು ದಿನಾಂಕ:04.11.2024 ರಂದು ಸೇವೆಯಲ್ಲಿ ಪುನರ್ ಸ್ಥಾಪಿಸಲಾಗಿರುತ್ತದೆ. |
| 18 | | ಕುಣಿಗಲ್ ಪುರಸಭೆ | 1 | ಶ್ರೀ. ಶಿವಪ್ರಸಾದ್.ಪಿ, ಹಿಂದಿನ ಮುಖ್ಯಾಧಿಕಾರಿ, (ಮೂಲ ಹುದ್ದೆ ಸಮದಾಯ ಸಂಘಟನಾಧಿಕಾರಿ) ರವರ ವಿರುದ್ಧ ಕುಣಿಗಲ್ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯಿಲ್ಲದೆ ನಿಯಮಬಾಹಿರವಾಗಿ ಅಂತರ್ ನಿಧಿ ವರ್ಗಾವಣೆ ಮಾಡಿರುವುದು, ಠೇವಣೀ ಕಾಮಗಾರಿಗಳನ್ನು ಸಂಪೂರ್ಣವಾಗಿ ಮೇಲ್ವಿಚಾರಣೆಯಲ್ಲಿ ವಿಫಲವಾಗಿರುವ ಪ್ರಕರಣದಲ್ಲಿ ದಿನಾಂಕ:21.11.2024 ರಂದು **ಅಮಾನತ್ತು** ಮಾಡಲಾಗಿರುತ್ತದೆ. ದಿನಾಂಕ:26.11.2024 ರ ಪರಿಷ್ಕೃತ ಆದೇಶದಲ್ಲಿ ಸದರಿಯವರನ್ನು ಸೇವೆಯಲ್ಲಿ ಪುನರ್ ಸ್ಥಾಪಿಸಿ ಆದೇಶಿಸಲಾಗಿರುತ್ತದೆ. ಮುಂದುವರೆದು ದಿನಾಂಕ:08.10.2024 ರ ಆದೇಶದಲ್ಲಿ **ವಿಚಾರಣಾಧಿಕಾರಿಗಳನ್ನು** ನೇಮಕ ಮಾಡಲಾಗಿರುತ್ತದೆ. |
| 19 | | ಆನೇಕಲ್ ಪುರಸಭೆ | 1 | ಶ್ರೀ ಹೆಚ್ ಎನ್ ನಟರಾಜ್, ಹಿಂದಿನ ಮುಖ್ಯಾಧಿಕಾರಿ, ರವರ ವಿರುದ್ಧ ಆನೇಕಲ್ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಗ್ರಾಮ ಪಂಚಾಯಿತಿಗೆ ಸೇರಿದ ಜಮೀನಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಪುರಸಭೆಯ ಆಸ್ತಿ ವಹಿಗಳಲ್ಲಿ ಅಕ್ರಮವಾಗಿ 69 ನಿವೇಶನಗಳಗೆ ಖಾತೆ ನೀಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದೇಶನಾಲಯದ ಆದೇಶ ದಿನಾಂಕ:06.01.2025 ರಲ್ಲಿ **ವಿಚಾರಣಾಧಿಕಾರಿಗೆ** ನೇಮಿಸಿ ಆದೇಶಿಸಲಾಗಿರುತ್ತದೆ. |
| 20 | | ಚಿಕ್ಕಬಾಣಾವರ ಪುರಸಭೆ | 1 | ಶ್ರೀ ಹೆಚ್ ಎ ಕುಮಾರ್, ಹಿಂದಿನ ಮುಖ್ಯಾಧಿಕಾರಿ ರವರ ವಿರುದ್ಧ ಚಿಕ್ಕಬಾಣಾವರ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ 2021-2022ನೇ ಸಾಲಿನಲ್ಲಿ ಕೆ.ಟಿ.ಟಿ.ಪಿ ನಿಯಮಗಳನ್ನು ಉಲ್ಲಂಘಿಸಿ ಸಾಮಾಗ್ರಿಗಳನ್ನು ಖರೀದಿಸಲು ಸಕ್ಷಮ ಪ್ರಾಧಿಕಾರ ಹಾಗೂ ಕೌನ್ಸಿಲ್ ಅನುಮೋದನೆಯನ್ನು ಪಡೆಯದೇ ನಿಯಮಬಾಹಿರವಾಗಿ ಕೋಟೆಷನ್ ಮೂಲಕ ವಿವಿಧ ಸಾಮಾಗಿಗಳನ್ನು ಖರೀದಿಸಿರುವ ಹಾಗೂ ಇನ್ನಿತರ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿಯವರನ್ನು ದಿನಾಂಕ:03.01.2025 ರಲ್ಲಿ ಸೇವೆಯಿಂಧ **ಅಮಾನತ್ತುಗೊಳಿಸಿ** ಆದೇಶಿಸಲಾಗಿರುತ್ತದೆ. ನಿರ್ದೇಶನಾಲಯದ ಆದೇಶ ದಿನಾಂಕ:18.02.2026 ರಲ್ಲಿ **ವಿಚಾರಣಾಧಿಕಾರಿಗಳನ್ನು** ನೇಮಿಸಿ ಆದೇಶಿಸಲಾಗಿರುತ್ತದೆ. |
| 21 | | ಮಲೇಬೆನ್ನೂರು ಪುರಸಭೆ | 1 | ಶ್ರೀ ಭಜಕ್ಕನವರ, ಹಿಂದಿನ ಮುಖ್ಯಾಧಿಕಾರಿ, ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು ರವರ ವಿರುದ್ಧ ಮಲೇಬೆನ್ನೂರು ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧೀಯಲ್ಲಿ ಜಿಲಾಧಿಕಾರಿಗಳು ರವರ ಆದೇಶ ಸಂಖ್ಯೆ:ಜಿನಕೋ.ದಾ(2)/ಸಿಆರ್/84/2024-25 ದಿನಾಂಕ:29.05.2025 ರಲ್ಲಿ ಸದರಿಯವರನ್ನು **ಅಮಾನತ್ತು** ಆದೇಶಿಲಾಗಿರುತ್ತದೆ. ನಿರ್ದೇಶನಾಲಯದ ಆದೇಶ ದಿನಾಂಕ:28.01.2026ರಲ್ಲಿ ಸೇವೆಯಲ್ಲಿ ಪುನರ್ ಸ್ಥಾಪಿಸಿ ಆದೇಶಿಸಲಾಗಿರುತ್ತದೆ. |
| 22 | | ಹೊನ್ನಾಳಿ ಪುರಸಭೆ | 1 | ಶ್ರೀಮತಿ.ನಿರಂಜನಿ, ಹಿಂದಿನ ಮುಖ್ಯಾಧಿಕಾರಿ ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು ರವರ ವಿರುದ್ಧ ಹೊನ್ನಾಳಿ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧೀಯಲ್ಲಿ ಜಿಲಾಧಿಕಾರಿಗಳು ರವರ ಆದೇಶ ಸಂಖ್ಯೆ:ಜಿನಕೋ.ದಾ(2)/ಸಿಆರ್/81/2024-25 ದಿನಾಂಕ:22.05.2025 ರಲ್ಲಿ ಸದರಿಯವರನ್ನು **ಅಮಾನತ್ತು** ಆದೇಶಿಲಾಗಿರುತ್ತದೆ. ನಿರ್ದೇಶನಾಲಯದ ಆದೇಶ ದಿನಾಂಕ:01.09.2025 ರಲ್ಲಿ ಸೇವೆಯಲ್ಲಿ ಪುನರ್ ಸ್ಥಾಪಿಸಿ ಆದೇಶಿಸಲಾಗಿರುತ್ತದೆ. |
| 23 | | ಗುಡಿಬಂಡೆ ಪಟ್ಟಣ ಪಂಚಾಯಿತಿ | 1 | ಎಸ್. ರಾಜಶೇಖರ್, ಹಿಂದಿನ ಮುಖ್ಯಾಧಿಕಾರಿ ರವರ ವಿರುದ್ಧ ಗುಡಿಬಂಡೆ ಪಟ್ಟಣ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದೇಶನಾಲಯದ ಆದೇಶ ದಿನಾಂಕ:12.12.2023 ರಲ್ಲಿ **ವಿಚಾರಣಾಧಿಕಾರಿಗಳನ್ನು** ನೇಮಿಸಿ ಆದೇಶಿಸಲಾಗಿರುತ್ತದೆ. |
| 24 | | ಮೊಳಕಾಲ್ಮೂರು ಪಟ್ಟಣ ಪಂಚಾಯಿತಿ | 1 | ಶ್ರೀ ಎಲ್ ವಿ ಮಂಜುನಾಥ, ಹಿಂದಿನ ಮುಖ್ಯಾಧಿಕಾರಿ, ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು ರವರ ವಿರುದ್ಧ ಮೊಳಕಾಲ್ಮೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿರುವ ಬಗ್ಗೆ, ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಕುರಿತಾದ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ:13.03.2024 ರಲ್ಲಿ **ಅಮಾನತ್ತು** ಆದೇಶ ಮಾಡಲಾಗಿರುತ್ತದೆ. |

| | | | | |
|---|---|---|---|---|
| 25 | | ಮಾಗಡಿ ಪುರಸಭೆ | 1 | ಶ್ರೀ ಎಂಎನ್ ಮಹೇಶ್, ಹಿಂದಿನ ಮುಖ್ಯಾಧಿಕಾರಿ, ಮೂಲ ಹುದ್ದೆ ಸಮುದಾಯ ಸಂಘಟನಾಧಿಕಾರಿ ರವರ ವಿರುದ್ಧ ಮಾಗಡಿ ಪುರಸಭೆ ವ್ಯಾಪ್ತಿಯಲ್ಲಿ ನಿಯಮಬಾಹಿರವಾಗಿ ಖಾತೆ ವರ್ಗಾಯಿಸಿ ನಮೂನೆ-3 ನ್ನು ವಿತರಿಸಿರುವುದು ಹಾಗೂ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆಯದೇ ನಿವೇಶನಗಳನ್ನು ವಿಗಂಡಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದೇಶನಾಲಯದ ಆದೇಶ ದಿನಾಂಕ:18.05.2024 ರಲ್ಲಿ **ವಿಚಾರಣಾಧಿಕಾರಿಗಳನ್ನು** ನೇಮಕ ಮಾಡಲಾಗಿರುತ್ತದೆ. |
| 26 | ಮೈಸೂರು | ಮಳವಳ್ಳಿ ಪುರಸಭೆ | 1 | ಕರ್ತವ್ಯಲೋಪ ಹಾಗೂ ಅವ್ಯವಹಾರ ಕುರಿತು ಶ್ರೀ ಎಸ್.ಡಿ ಮಂಜುನಾಥ್ ರವರ ವಿರುದ್ಧ ಇಲಾಖಾ ವಿಚಾರಣೆಗೆ **ವಿಚಾರಣಾಧಿಕಾರಿ**ಯನ್ನು ನೇಮಕಗೊಳಿಸಿ ಆದೇಶಿಸಲಾಗಿರುತ್ತದೆ. |
| 27 | | ಸಕಲೇಶಪುರ ಪುರಸಭೆ | 1 | ಶ್ರೀ.ಎಸ್ ಎಸ್.ಮಂಜುನಾಥ್ ರವರು ಪುರಸಭೆಯಲ್ಲಿ ತ್ಯಾಜ್ಯ ಘಟಕ ಸ್ಥಾಪಿಸುವ ಕಾಮಗಾರಿಯಲ್ಲಿ ನಡೆದಿರುವ ಅವ್ಯವಹಾರದ ಆರೋಪದಲ್ಲಿ ಇಲಾಖಾ ವಿಚಾರಣೆಗೆ **ವಿಚಾರಣಾಧಿಕಾರಿ**ಯನ್ನು ನೇಮಕಗೊಳಿಸಿ ಆದೇಶಿಸಲಾಗಿರುತ್ತದೆ. |
| 28 | | ಆಲೂರು ಪಟ್ಟಣ ಪಂಚಾಯಿತಿ | 1 | ಶ್ರೀ ಹೆಚ್.ಆರ್ ಬಸವರಾಜು, ಇವರು ಲಂಚದ ಹಣ ಸ್ವೀಕರಿಸಿದ ಲೋಕಾಯುಕ್ತ ಪ್ರಕರಣದಲ್ಲಿ ಸೇವೆಯಿಂದ **ಅಮಾನತ್ತು**ಗೊಳಿಸಿ ಆದೇಶಿಸಲಾಗಿರುತ್ತದೆ. |
| 29 | | ತಿ ನರಸೀಪುರ ಪುರಸಭೆಯ | 1 | ಶ್ರೀ ಅಶೋಕ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಅನುಬಂಧ 1 ರಿಂದ 4 ರವರೆಗಿನ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ. |
| 30 | | ತಿ ನರಸೀಪುರ ಪುರಸಭೆಯ | 1 | ಶ್ರೀ ಶ್ರೀನಿವಾಸ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಅನುಬಂಧ 1 ರಿಂದ 4 ರವರೆಗಿನ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ. |
| 31 | | ಪಿರಿಯಾಪಟ್ಟಣ ಪುರಸಭೆ | 1 | ಶ್ರೀ ಮಧು.ಹೆಚ್.ಪಿ ರವರು ಶ್ರೀ ಚಂದ್ರಶೇಖರ್.ಬಿ.ಎನ್, ಪೌರಾಯುಕ್ತರು, ನಗರಸಭೆ ಹೂಟಗಳ್ಳಿ ರವರ ಮೇಲೆ ಹಲ್ಲೆ ಮಾಡಿರುವ ಪ್ರಕರಣದಲ್ಲಿ ನಿರ್ದೇಶನಾಲಯದ ಆದೇಶ ದಿನಾಂಕ:28.11.2025 ರನ್ವಯ ಸೇವೆಯಿಂದ ಅಮಾನತ್ತು ಮಾಡಲಾಗಿತ್ತು. |
| 32 | | ಪಿರಿಯಾಪಟ್ಟಣ ಪುರಸಭೆ | 1 | **ಶ್ರೀ ಡಿ.ಪುಟ್ಟರಾಜು** ರವರು ಅನಧಿಕೃತ ಖಾತೆ ನಮೂದು ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಅನುಬಂಧ 1 ರಿಂದ 4 ರವರೆಗಿನ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ. |
| 33 | | ಹೆಚ್ ಡಿ ಕೋಟೆ | 1 | ಶ್ರೀ ಡಿ.ಎನ್.ವಿಜಯಕುಮಾರ್ ರವರು ಅನಧಿಕೃತ ಖಾತೆ ವಿತರಿಸಿರುವ ಪ್ರಕರಣದಲ್ಲಿ ಇವರ ವಿರುದ್ಧ ಅನುಬಂಧ 1 ರಿಂದ 4 ರವರೆಗಿನ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ |
| 34 | | ಹೆಚ್ ಡಿ ಕೋಟೆ | 1 | ಶ್ರೀ.ಚೆಲುವರಾಜಸ್ವಾಮಿ ರವರು ಹಿಂದಿನ ಮುಖ್ಯಾಧಿಕಾರಿಗಳು ಹೆಚ್ ಡಿ ಕೋಟೆ, ಪಟ್ಟಣ ಪಂಚಾಯಿತಿ ರವರು ಕರ್ತವ್ಯ ಲೋಪದಿಂದ ಉಂಟಾಗಿದ್ದ ಆರ್ಥಿಕ ನಷ್ಟದ ವಸೂಲಾತಿಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ ನಅಇ 24 ಡಿಎಂಕೆ 2017 ದಿನಾಂಕ 20.05.2017ರನ್ವಯ ಆದೇಶಿಸಲಾಗಿರುತ್ತದೆ. |
| 35 | | ಹೆಚ್ ಡಿ ಕೋಟೆ | 1 | ಹೆಚ್.ಡಿ ಕೋಟೆ ಪುರಸಭೆಯಲ್ಲಿ ಅನಧಿಕೃತ ರೆವಿನ್ಯೂ ಭೂಮಿಗಳನ್ನು ದಾಖಲಿಸಿರುವ ಹಾಗೂ ರಸ್ತೆ ಕೋಟೆಕೆರೆ ಜಾಗವನ್ನು ಅಕ್ರಮವಾಗಿ ದಾಖಲಿಸಿರುವ ಪ್ರಕರಣದಲ್ಲಿ ಶ್ರೀ ಸುರೇಶ್, ಮುಖ್ಯಾಧಿಕಾರಿ , ಹೆಚ್.ಡಿ ಕೋಟೆ ಪುರಸಭೆ ರವರನ್ನು ಅಮಾನತ್ತುಮಾಡಿ, ಶ್ರೀ ಡಿ.ಎನ್.ವಿಜಯಕುಮಾರ್ ಹಿಂದಿನ ಮುಖ್ಯಾಧಿಕಾರಿ ರವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ದಿನಾಂಕ:21.07.2025 ರಂದು ಆದೇಶಿಸಲಾಗಿರುತ್ತದೆ. |
| 36 | | ಗುಂಡ್ಲುಪೇಟೆ ಪುರಸಭೆ | 1 | ಶ್ರೀ ಆರ್ ಹೇಮಂತರಾಜು, ಹಿಂದಿನ ಮುಖ್ಯಾಧಿಕಾರಿ, ಪುರಸಭೆ ಗುಂಡ್ಲುಪೇಟೆ ರವರು ನಿವೇಶನ ಹಂಚಿಕೆ ಮಾಡುವಲ್ಲಿ ನಿಯಮ/ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಅನರ್ಹ ಫಲಾನುಭವಿಗಳಿಗೆ ನೀಡಿರುವ ನಿವೇಶನಗಳ ಹಕ್ಕುಪತ್ರಗಳನ್ನು ರದ್ದುಪಡಿಸಿರುವ ಪ್ರಕರಣದಲ್ಲಿ ಭಾಗಿಯಾಗಿರುವುದಕ್ಕೆ ಇವರ ವಿರುದ್ಧ ದಿನಾಂಕ:10.11.2025 ರಂದು ಇಲಾಖಾ ವಿಚಾರಣಾ ನಡೆಸಲು ಆದೇಶಿಸಲಾಗಿರುತ್ತದೆ. |